ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ವೆಂಕಟರಾಮಯ್ಯನವರೇ, ನಾಗರತ್ನಮ್ಮನವರು ಮಾತನಾಡಿದ ಮೇಲೆ ತಮ್ಮ ಅವಕಾಶ....

ಶ್ರೀಮತಿ ಕೆ. ಎಸ್. ನಾಗರತ್ನಮ್ಮ —ಮಾನ್ಯ ಅಧ್ಯಕ್ಷರೆ, ಈ ನಿಲುವಳಿ ಸೂಚನೆ ಬಗ್ಗೆ ಹೇಳುವುದಕ್ಕಿಂತ ಮುಂಚೆ ತಮ್ಮದೊಂದು ರೂಲಿಂಗ್ ಅನ್ನು ಕಾಯ್ದಿರಿಸಿದ್ದೀರಿ, ಅದನ್ನು ಯಾವಾಗ ಕೊಡುತ್ತೀರಿ.

ಅಧ್ಯಕ್ಷರು.—ಸಂಜೆ ಕೊಡುತ್ತೇನೆ.

(2) ತುಂಗ ಭದ್ರ ರಿಸರ್‌ವಾಯರ್ ನೀರಿನ ಹಂಚಿಕೆ ಬಗ್ಗೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಈ ನನ್ನ ನಿಲುವಳಿ ಸೂಚನೆಯನ್ನು ಓದುತ್ತೇನೆ. "ತುಂಗಭದ್ರಾ ನಾಲೆ ಕೆಳಗಡೆ ಬರತಕ್ಕ ಜಮೀನಿನಲ್ಲಿ ಬೆಳೆದು ನಿಂತಿರುವ ಬೆಳೆ ಒಣಗುತ್ತಿದ್ದರೂ ನಾಲೆಗೆ ನೀರು ಬಿಡದೆ ಆಂಧ್ರ ಪ್ರದೇಶಕ್ಕೆ ನೀರು ಒದಗಿಸಲು ಮಾನ್ಯ ಮಂತ್ರಿಗಳು ಆಶ್ವಾಸನೆ ನೀಡಿರುವ ವಿಚಾರದ ಬಗ್ಗೆ ತುಂಗಭದ್ರಾ ರಿಸರ್‌ವಾಯರ್ ನೀರನ್ನು ನಾವು ಮತ್ತು ಆಂಧ್ರ ಪ್ರದೇಶದವರು ಇಬ್ಬರೂ ಶೇರ್ ಮಾಡಿಕೊಳ್ಳಬೇಕು ಎನ್ನುವುದು ನಿಗದಿಯಾಗಿದೆ. ೧೯೮೮ಕ್ಕೂ ಹಾಗೂ ೧೯೮೯ಕ್ಕೂ ಕಂಪೇರ್ ಮಾಡಿ ನೋಡಿದಾಗ ಈ ವರ್ಷ ಮಳೆ ಚೆನ್ನಾಗಿ ಆಗಿದೆ. ಪ್ರತಿ ವರ್ಷ ನೀರು ಇಲ್ಲ ಎಂದು ತೆಗೆಯುತ್ತಿದ್ದ ನೋಟಿಫಿಕೇಶನ್ ಈ ವರ್ಷ ಇಲ್ಲ. ಈ ವರ್ಷ ನೋಟಿಫಿಕೇಶನ್ ತೆಗೆಯಲಿಲ್ಲ. ಆದ್ದರಿಂದ ರೈತರು ಎಲ್ಲರೂ ಸಹ ಸಾಕಷ್ಟು ನೀರು ಇದೆ, ಈ ವರ್ಷ ನಾವು ಚೆನ್ನಾಗಿ ಬೆಳೆ ಬೆಳೆದುಕೊಳ್ಳಬಹುದು ಎಂಬ ಖುಷಿಯಲ್ಲಿ ಬಹಳಷ್ಟು ಬೆಳೆ ಇಟ್ಟಿದ್ದರು. ಆದರೆ ಈ ವರ್ಷ ಅಂತಹ ಯಾವುದೇ ನೋಟಿಫಿಕೇಷನ್ ಇಲ್ಲ. ನೀರು ತುಂಬಾ ತುಂಬಿದೆ ಎಂಬ ಇಂಪ್ರೆಷನ್ ಬಂತ್ತು. ರಾಯಚೂರು ಒಳ್ಳಾರಿ ಮತ್ತು ಇತರ ಭಾಗಗಳಲ್ಲಿ ಬೇಕಾದಷ್ಟು ಕ್ರಾಪ್ಸ್‌ಗಳು ಇವೆ. ಸಲಹಾ ಸಮಿತಿಯ ಮೀಟಿಂಗ್‌ನಲ್ಲಿ ನೀರನ್ನು ಏಪ್ರಿಲ್‌ನಲ್ಲಿ ಕೊಡುತ್ತೇವೆಂದು ಪ್ರಾಮಿಸ್ ಮಾಡಿದರು. ಆದರೆ ಆಂಧ್ರ ಪ್ರದೇಶದವರು ೧೫–೨೦ ದಿವಸದ ಕೆಳಗೆ ಪ್ರಾಜೆಕ್ಟ್‌ನಿಂದ ನದಿಗೆ ನೀರನ್ನು ಬಿಟ್ಟು ಕೊಂಡರು. ಚಾನಲ್‌ನಿಂದ ನೀರನ್ನು ತೆಗೆದುಕೊಳ್ಳುವುದಕ್ಕೆ ಬದಲು ನದಿಯಿಂದ ನದಿಗೆ ತಿರುಗಿಸಿ ಕೊಂಡರು. ಈಗ ವಾಟರ್ ಡಿಫ್ಲೀಟ್ ಆಗಿ ನಮ್ಮ ರೈತರಿಗೆ ಅವರಿಗೆ ಬರಬೇಕಾದ ನೀರು ಸಿಗುತ್ತಾ ಇಲ್ಲ. ಈಗ ಮಾನ್ಯ ಜೆ. ಹೆಚ್. ಪಟೇಲ್‌ರವರು ಭದ್ರಾ ರಿಸರ್‌ವಾಯರ್ ನೀರು ಕೊಡುತ್ತೇವೆಂದು ಹೇಳಿದ್ದಾರೆ. Now he has promised to give water from the Bhadra reservoir. ಈಗ ನಮ್ಮ ಜನಗಳ, ನಮ್ಮ ರೈತರ ಗತಿ ಏನು. ಅವರಿಗೆ ಏನು ಆಗಬೇಕು. ಅಚ್ಚ ಕಟ್ಟಿನವರಿಗೆ ಏನು ಆಗಬೇಕು ನನಗೆ ಬಹಳ ಸಂಕಟ ಆಗುತ್ತಿದೆ. ಇದು ನಿಜವಾಗಿಯೂ gross misuse, mismanagement of the water by the officers and bad influence and interference of the strong people ನಿಂದಾಗಿ ನಮ್ಮ ರೈತರಿಗೆ ತೊಂದರೆ ಆಗಿದೆ. ನಮ್ಮ ರೈತರಿಗೆ ಇಷ್ಟು ತೊಂದರೆ ಆದರೂ ಆಂಧ್ರದವರಿಗೆ ನೀರು ಕೊಡುವ ಅವಶ್ಯಕತೆ ಏನು ಇತ್ತು ? ನಮ್ಮ ಜನಗಳಿಗೆ ಎಷ್ಟು ತೊಂದರೆ ಇದೆ. ನಮ್ಮ ಸ್ಟ್ಯಾಂಡಿಂಗ್ ಕ್ರಾಪ್ ಹೋಗುತ್ತಿದೆ. ಆಂಧ್ರಾದ್ದರಲ್ಲಿ ನಮಗೆ ಹೆಚ್ಚು ಇದ್ದರೆ ಕೊಡಬಹುದಿತ್ತು. ನಮ್ಮ ರೈತರಿಗೆ ಜಾಸ್ತಿ ಆಗಿಹೋಕ್ಕದ್ದು ಅವರಿಗೆ ಕೊಡಬಹುದಿತ್ತು. ನಮ್ಮ ರೈತರ ಜಮೀನುಗಳಿಗೆ ನೀರಿಲ್ಲ, ಕ್ರಾಪ್ ಎಲ್ಲಾ ಒಣಗುತ್ತಿದೆ. ಅಂಥಾದ್ದರಲ್ಲಿ ಮಾನ್ಯ ಜೆ. ಹೆಚ್. ಪಟೇಲ್‌ರವರು ಹೋಗಿ ನೀರು ಕೊಡುತ್ತೇವೆ ಎಂದು ಹೇಳಿರುವುದರ ಔಚಿತ್ಯವೇನು ಎನ್ನುವುದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೆ, ತುಂಗಭದ್ರ ಎಡದಂಡೆ ಮತ್ತು ಬಲದಂಡೆಯ ಅಚ್ಚುಕಟ್ಟುದಾರರು ೩ ಲಕ್ಷ ಎಕರೆಗಳಲ್ಲಿ ಬೆಳೆಯನ್ನು ಇಟ್ಟಿದ್ದಾರೆ. ಅವರ ಬೆಳೆ ಪೂರ್ತಿಯಾಗುವ ವೇಳೆಗೆ ಅಂದರೆ ಏಪ್ರಿಲ್ ಕಡೇ ವಾರ ಅಥವಾ ಮೇ ಮೊದಲನೇ ವಾರದವರೆಗೆ ನೀರನ್ನು ಕೊಡಬೇಕಾಗುತ್ತದೆ. ಆದರೆ ಇನೇ ತಾರೀಖು ನೀರನ್ನು ನಿಲ್ಲಿಸಿಬಿಡುತ್ತೇವೆಂದು ನೋಟೀಸ್ ಕೊಟ್ಟಿದ್ದಾರೆ. ಇದರ ಬಗ್ಗೆ ಗಲಭೆಗಳಾಗಿವೆ, ೨೧ ಸಾವಿರ ಜನ ಮುತ್ತಿಗೆ ಹಾಕಿದ್ದಾರೆ. ಆದರೆ ಸರ್ಕಾರದವರು ಯಾವ ಒಂದು ಆಶ್ವಾಸನೆ ಕೊಡದೆ ಕಾಲವನ್ನು ತಳ್ಳುತ್ತಿದ್ದಾರೆ ಇವತ್ತಿನ ದಿವಸ ರೈತರು ಚಳುವಳಿಗೆ ಇಳಿದಿದ್ದಾರೆ ಈಗ ಎರಡು ಪ್ರಶ್ನೆಗಳಿವೆ. ೨ ಟಿಎಂಸಿ ವಾಟರ್ ಆಂಧ್ರಕ್ಕೆ ಕೊಡಬಾರದು. ನಮಗೇ ಕೊಡಬೇಕು ಎನ್ನುವುದು. ಈಗ ೨ ಟಿಎಂಸಿ ವಾಟರನ್ನು ಬಿಟ್ಟಬಿಟ್ಟಿದ್ದಾರೆ.

ನಾನು ಬಳ್ಳಾರಿಯಲ್ಲಿ ಇದ್ದಾಗ ೧.೮ ಟಿ.ಎಂ.ಸಿ. ಯಷ್ಟು ನೀರು ಇತ್ತು. ನೀರನ್ನು ಯಾವ ಕಾಲುವೆಗೆ ಬಿಟ್ಟಿದ್ದಾರೊ ಗೊತ್ತಿಲ್ಲ.

ಶ್ರೀ ಎಂ. ರಾಮಪ್ಪ.—ರಿವರ್‌ಗೆ ಬಿಟ್ಟಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ರಿವರ್‌ನಲ್ಲಿ ಬಿಟ್ಟಿದ್ದಾರೆಂದು ಮಾನ್ಯ ರಾಮಪ್ಪನವರು ಹೇಳುತ್ತಿದ್ದಾರೆ. ೨೦ ಟಿಎಂಸಿ ನೀರು ಭದ್ರದಲ್ಲಿದೆ. ೧೫ ಟಿಎಂಸಿ ಮಾತ್ರ ಬೇಕಾಗುತ್ತದೆ, ೫ ಟಿಎಂಸಿ ಎಕ್ಸಸ್ ಇದೆ, ಆದ್ದರಿಂದ ೫ ಟಿಎಂಸಿ ಕೊಟ್ಟೆವು ಎಂದಾಯಿತು. ಇದರ ಬಗ್ಗೆ ಸಾಲ್ಕ್ಕರು ಕಮಿಟಿ ಗಳಾಯಿತು. ಒಂದು ಸಾರಿ ಮೀಟಿಂಗ್ ಕರೆದರು ೨೦ ಸಾವಿರ ಜನ ರೈತರು ಬಂದಿದ್ದರು. ರೈತರಿಗೆ ಹೋಗಲಿಕ್ಕೆ ಬಿಡುತ್ತಾ ಇರಲಿಲ್ಲ. ೧೪ಳಗನೇ ಸೆಕ್ಷನ್ ಜಾರಿಗೆ ತಂದು ಅವರನ್ನು ಓಡಿಸಿದರು. ಕನ್ಸಲ್ಟೇಟೀವ್ ಕಮಿಟಿ ಮೀಟಿಂಗಿಗೆ ಮಾನ್ಯ ಪ್ರಕಾಶ್‌ರವರೂ ಹೋಗಿದ್ದರು, ಮಾನ್ಯ ಜೆ.ಹೆಚ್. ಪಟೇಲರೂ ಹೋಗಿದ್ದಾರೆ. ಆದರೆ ನೀರು ಕೊಡುವ ಬಗ್ಗೆ ಆಶ್ವಾಸನೆ ಕೊಡಲಿಲ್ಲ. ಅಲ್ಲಿ ಬಳ್ಳಾರಿ ರೈತರು ವರ್ಸಸ್ ರಾಯಚೂರು ರೈತರು ಎಂದು ಅವರವರಲ್ಲೇ ಪರಸ್ಪರ ವಿರೋಧಗಳು ಬಂದು ಏನೊಂದು ತೀರ್ಮಾನವನ್ನೂ ತೆಗೆದುಕೊಳ್ಳದೆ ಬಿಟ್ಟಿದ್ದಾರೆ. ಈಗ ಪರಿಸ್ಥಿತಿ ಗಂಭೀರವಾಗಿದೆ, ನೂರಾರು ಎಕರೆಗಳಲ್ಲಿರುವ ಬೆಳೆ ನಾಶವಾಗುತ್ತಿದೆ. ಕೊನೆಗೆ ರೈತರು ತೊಂದರೆಗೆ ಒಳಗಾಗುತ್ತಾರೆ. ಮಾನ್ಯ ಜೆ.ಹೆಚ್. ಪಟೇಲರು ಶಿವಮೊಗ್ಗದವರು ಅವರು ಭದ್ರದಿಂದ ನೀರನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡಬೇಕು. ರಾಯಚೂರು, ರೈತರು ಬಳ್ಳಾರಿ ರೈತರು ಎನ್ನುವುದನ್ನು ಹೋಗಲಾಡಿಸಿ ಎಲ್ಲ ರೈತರಿಗೂ ಅನುಕೂಲವಾಗುವಂತೆ ನೀರನ್ನು ಕೊಡಿಸಬೇಕು. ಆಲ್ಲಿ ರೈತ ಸಂಘದವರು ಎಲ್ಲರೂ ಹೋಗಿ ನೀರು ಬಿಡಬೇಕು ಎಂದು ಒತ್ತಾಯ ಮಾಡಿದರು. ಇದರ ಬಗ್ಗೆ ಮಾತನಾಡುವಾಗಲೂ ಒಂದು ಪ್ರಶ್ನೆ ಬಂತು. ಭದ್ರಾ ಜಲಾಶಯದ ಅಚ್ಚುಕಟ್ಟುದಾರರನ್ನು ರೈತರನ್ನು ಶಾಸಕರು ಒಪ್ಪಿಸಿ ಅಲ್ಲಿ ಎಕ್ಸಸ್ ನೀರು ಇದೆ ಎಂದು ಹೇಳಿ ನೀರು ಬಿಟ್ಟರು. ಈಗಲಾದರೂ ಕೂಡ ಮಾನ್ಯ ಮುಖ್ಯ ಮಂತ್ರಿಗಳು ಅವರಿಗೆ ಇರುವ ಅಧಿಕಾರವನ್ನು ಉಪಯೋಗ ಮಾಡಿಕೊಂಡು ಭದ್ರಾದಿಂದ ನೀರು ಬಿಡಿಸುವ ಹಾಗೆ ಮಾಡಬೇಕು. ಎಕ್ಸಸ್ ೫ ಟಿಎಂಸಿ ಇದೆ ಎಂದು ಹೇಳುತ್ತಾರೆ. ಅದನ್ನೂ ಬಿಡಿಸಿ ಕರ್ನಾಟಕದಲ್ಲಿ ರೈತರ ಬವಣೆಯನ್ನು ತಪ್ಪಿಸಬೇಕು. ಎರಡನೆಯ ವಿಚಾರವೇನೆಂದರೆ, ತುಂಗಭದ್ರಾದಲ್ಲಿ ೩೦ ಪರ್ಸೆಂಟ್ ಸಿಲ್ಟ್ ಇವೆ, ನೀರು ಕಡಿಮೆಯಾಗಿದೆ. ಇದೇ ರೀತಿ ಇದ್ದರೆ ಇನ್ನು ೫–೬ ವರ್ಷಗಳು ಹೋದರೆ ೫೦ ಪರ್ಸೆಂಟ್ ಆಗುತ್ತದೆ, ಆಂಧ್ರದವರು ನೀರನ್ನು ತೆಗೆದುಕೊಳ್ಳುತ್ತಾ ಇದ್ದಾರೆ. ಅಲ್ಲಿ ತಮಿಳುನಾಡಿನವರು ಜಾಸ್ತಿ ಇದ್ದಾರೆ. ಆಂಧ್ರದ ಜಮೀನುದಾರರು ಅವರಿಗೆ ಸ್ವಲ್ಪ ಲಂಚಕೊಟ್ಟು ಸರಿ ಮಾಡಿಕೊಂಡು ನೀರನ್ನು ಹೆಚ್ಚಾಗಿ ತೆಗೆದುಕೊಂಡು ಹೋಗುತ್ತಾ ಇದ್ದಾರೆ ಎನ್ನುವ ಮಾತು ಇದೆ. ಈಗ ಇರುವುದರಲ್ಲಿ ವೇಸ್ಟ್ ಮಾಡುವುದು ಬಹಳ ಜಾಸ್ತಿಯಾಗಿದೆ. ೪–೫ ಟಿಎಂಸಿಯಷ್ಟು ನೀರು ವೇಸ್ಟಾಗಿ ನದಿ ಮುಖಾಂತರ ಆಂಧ್ರಕ್ಕೆ ಹೋಗುತ್ತಿದೆ, ಇದರಿಂದ ರೈತರಿಗೆ ತೊಂದರೆಯಾಗಿದೆ ಎನ್ನುವ ಆಪಾದನೆ ಇದೆ. ವಾಟರ್ ಮ್ಯಾನೇಜ್‌ಮೆಂಟ್ ಶ್ರದ್ಧೆ ವಹಿಸಬೇಕು. ೩೦ ಪರ್ಸೆಂಟ್ ಸಿಲ್ಟ್ ಇರುವುದನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡಬೇಕು, ತಕ್ಷಣ ನಮ್ಮ ರೈತರಿಗೆ ಪರಿಹಾರ ಕೊಡಬೇಕು. ನಮ್ಮ ರೈತರು ಸುಮಾರು ಮೂರು ಕೋಟಿ ರೂಪಾಯಿ ಬೆಳೆ ಇಟ್ಟಿದ್ದಾರೆ ತಕ್ಷಣ ಅದಕ್ಕೆ ನೀರು ಕೊಡಿಸುವುದಕ್ಕೆ ಪ್ರಯತ್ನ ಮಾಡಬೇಕು.

ಮಾನ್ಯ ಬೊಮ್ಮಾಯಿಯವರು ಬೆಂಗಳೂರಿನಿಂದ ಆಶ್ವಾಸನೆ ಕೊಡುವುದು ಬೇಡ. ಇವರು ಅಲ್ಲಿಗೆ ಹೋಗಿ ಅಲ್ಲಿರುವ ಶಾಸಕರ ಸರಕಾರ ತೆಗೆದುಕೊಂಡು ಭದ್ರಾ ರೈತರ ಜೊತೆ ಮಾತನಾಡಬೇಕು. ಈ ರೀತಿ ಮಾಡಿದರೆ ರೈತರು ವಿರೋಧ ಮಾಡುವುದಿಲ್ಲ. ನೀರನ್ನು ಕೊಡಿಸಿದರೆ ರೈತರಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ತುರ್ತಾಗಿ ಕ್ರಮ ತೆಗೆದುಕೊಳ್ಳಬೇಕು. ಈ ಬಗ್ಗೆ ರೈತರ ಜೊತೆ ಮಾತನಾಡುವುದು ಒಳ್ಳೆಯದು. ನೀರು ವಿಚಾರ ಬಿಟ್ಟು ಬೇರೆ ಏನೂ ಅವರು ಹೇಳುವುದಿಲ್ಲ. ಆದ್ದರಿಂದ, ಮಾನ್ಯ ಬೊಮ್ಮಾಯಿಯವರು ಅಲ್ಲಿಗೆ ಹೋಗಿ ಅವರಿಗೆ ಆಶ್ವಾಸನೆಯನ್ನು ಕೊಟ್ಟು ನೀರು ಬಿಡುವಂಥ ವ್ಯವಸ್ಥೆ ಮಾಡಬೇಕು. ಬೆಳೆ ಹಾಳಾಗದಂತೆ ನೋಡಿಕೊಳ್ಳುವ ವ್ಯವಸ್ಥೆಯಾಗಬೇಕೆಂದು ಕೇಳಿಕೊಳ್ಳುತ್ತೇನೆ,

ಶ್ರೀ ಎಸ್. ಬಂಗಾರಪ್ಪ (ಸೊರಬ) —ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು, ಹಾಗೂ ಬೇರೆ ಮಾನ್ಯ ಸದಸ್ಯರು ವಿಷಯವನ್ನು ತಿಳಿಸಿದ್ದಾರೆ. ಇಲ್ಲಿ ಮಾನ್ಯ ಬೊಮ್ಮಾಯಿಯವರು ಗಮನಿಸಬೇಕಾದ ಅಂಶ ಇಷ್ಟೆ, ಸುಮಾರು ಒಂದು ನೂರು ಕೋಟಿ ರೂಪಾಯಿ ಬೆಳೆ ಬರತಕ್ಕಂತಾದ್ದು ಇದೆ ಎಂದು ಅಂದಾಜು ಮಾಡಿರುವುದು ಪತ್ರಿಕೆಯಲ್ಲಿ ಬಂದಿದೆ, ಆದ್ದರಿಂದ ಏನಾದರೂ ಮಾಡಿ ಬೆಳೆ ಉಳಿಸಿಕೊಳ್ಳತಕ್ಕಂತಹ ಪ್ರಯತ್ನ ಮಾಡಬೇಕಾಗುತ್ತದೆ. ಪದೇ ಪದೇ ಕಾವೇರಿ ನೀರನ್ನು ತಮಿಳುನಾಡಿಗೆ ಬಿಟ್ಟುಕೊಡುತ್ತೀರಿ. ಅವರು ನಮ್ಮ ಬೆಳೆ ಬೆಳೆದು ನಿಂತಿದೆ,

ನಮಗೆ ನೀರು ಬಿಟ್ಟುಕೊಡಿ ಎಂದು ಪದೇ ಪದೇ ಕೇಳುವುದರಿಂದ ಬಿಟ್ಟುಕೊಡುತ್ತಿದ್ದೀರಿ. ಒಂದೊಂದು ವರ್ಷದಲ್ಲೂ ಒಂದಲ್ಲ, ಎರಡಲ್ಲ, ಮೂರು ಸಾರಿ ನೀರನ್ನು ಬಿಟ್ಟು ಕೊಟ್ಟಿರುವುದು ಉಂಟು. ಈ ವಿಚಾರವನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳೋಣ. ಈಗ ನಮಗೆ ನೀರು ಸಾಕಾಗುತ್ತದೆ. ಬಿಡುತ್ತೇವೆ ಎನ್ನುವ ಪ್ರಶ್ನೆ ಬೇರೆ. ಇವೊತ್ತು ಬೆಳೆದು ನಿಂತಿರತಕ್ಕ ಬೆಳೆಯನ್ನು ನಾವು ಉಳಿಸಿಕೊಳ್ಳಬೇಕು. ಇನ್ನು ತುಂಗಭದ್ರಾದಲ್ಲಿ ಸುಮಾರು ೨೦-೩೦ ಪರ್‌ಸೆಂಟ್ ಸಿಲ್ಟ್ ಆಕ್ಯುಮುಲೇಟೆಡ್ ಆಗಿದೆ ಎಂಬ ಅಭಿಪ್ರಾಯ ಇದೆ. ಮೊದಲು ಪ್ರಾಜೆಕ್ಟ್ ಕಟ್ಟಿದಾಗ ನೀರು ಎಷ್ಟು ಪ್ರಮಾಣ ಇರುತ್ತದೋ ಮುಂದೆ ಅಷ್ಟು ಪ್ರಮಾಣದಲ್ಲಿ ನೀರು ಆಲ್ಲಿ ನಿಲ್ಲುವುದಿಲ್ಲ. ಇದೇ ತುಂಗಭದ್ರಾ ಪ್ರಾಜೆಕ್ಟ್ ಒಂದೇ ಅಲ್ಲ. ಯಾವುದೇ ಒಂದು ಪ್ರಾಜೆಕ್ಟ್ ತೆಗೆದುಕೊಂಡರೂ ಆಷ್ಟೆ, ಮಂಲೆನಾಡು ಕಡೆಯಿಂದ ಹರಿದುಹೋಗತಕ್ಕ ನದಿಗಳ ಪ್ರವಾಹದ ಫ್ಲೋರ್ಸ್ ಏನಿರುತ್ತದೆ. ಇದರಿಂದ ಸಾಮಾನ್ಯವಾಗಿ ಸಿಲ್ಟ್ ಹೋಗುತ್ತದೆ. ಈ ವಿಷಯದ ಬಗ್ಗೆ ನಮ್ಮ ಕೃಷಿ ವಿಜ್ಞಾನಿಗಳು ಸಹ ಈ ಸಿಲ್ಟ್ ತುಂಬಿಕೊಳ್ಳತಕ್ಕದರ ಬಗ್ಗೆ ಹೇಳುತ್ತಾರೆ. ಈ ನೀರಿನ ಜೊತೆ ಹರಿದು ಹೋಗತಕ್ಕ ಮಣ್ಣಿನ ಆ ಪ್ರಾಜೆಕ್ಟ್‌ನಲ್ಲಿ ಸೇರಿಕೊಳ್ಳುವುದರಿಂದ, ನೀರಿನ ಪ್ರಮಾಣ ಆ ಪ್ರಾಜೆಕ್ಟ್‌ನಲ್ಲಿ ಪ್ರತಿವರ್ಷ ಕಡಿಮೆಯಾಗುತ್ತದೆ. ಇದು ಸಾಮಾನ್ಯವಾಗಿ ಎಲ್ಲರಿಗೂ ತಿಳಿಯತಕ್ಕ ವಿಷಯ. ಇನ್ನು ಇದುವರೆಗೂ ನಾವು ಆಂಧ್ರಕ್ಕೆ ಕೊಡತಕ್ಕ ನೀರಿನ ಪಾಲು ಮತ್ತು ನಾವು ತೆಗೆದುಕೊಳ್ಳತಕ್ಕದ್ದು ದಾಖಲೆಯಲ್ಲಿದೆ, ಇದುವರೆಗೂ ನೀರನ್ನು ನಾವು ಕೊಡುತ್ತಾ ಬಂದಿದ್ದೇವೆ. ಈಗ ಬೆಳೆಗೆ ನೀರು ಕಡಿಮೆಯಾಗುತ್ತದೆ ಎನ್ನುವ ವಿಚಾರವನ್ನು ಯಾರು ಕೇಳಬೇಕಾಗಿತ್ತು. ಇಷ್ಟು ಸಾವಿರ ಎಕರೆಯಲ್ಲಿ ಬೆಳೆಯನ್ನು ಹಾಕಬಾರದು ಎಂದು ಸಂಬಂಧಪಟ್ಟಂತೆ ಮಾನ್ಯ ಮುಖ್ಯ ಮಂತ್ರಿಗಳು ಗಮನಿಸಬೇಕು. ನೀರಾವರಿ ಇಂಜಿನಿಯರುಗಳು ನೀರಿನ ಪ್ರಮಾಣ ಕಡಿಮೆಯಾಗಿದೆ, ಬೆಳೆಯನ್ನು ಇಡಬೇಡಿ ಎಂದು ಒಂದು ಎಚ್ಚರಿಕೆಯನ್ನು ಕೊಡಬೇಕಾಗಿತ್ತು. ಈ ವಿಚಾರದಲ್ಲಿ ಬಳ್ಳಾರಿ ಜಿಲ್ಲೆ ಕೃಷಿಕರಿಗೆ ರಾಯಚೂರು, ಗಂಗಾವತಿ, ಮಾನ್ವಿ ಮುಂತಾದ ಭಾಗಗಳ ಕೃಷಿಕರಿಗೆ ಮೊದಲೇ ನೀರು ಇರುವುದಿಲ್ಲ, ಎಂದು ಮುನ್ಸೂಚನೆ ಕೊಟ್ಟಿದ್ದರೆ, ಅವರು ಬೆಳೆ ಬೆಳೆಯಬೇಕೋ ಬೇಡವೋ ಎನ್ನುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತಿದ್ದರು. ಕಾವೇರಿ ನೀರು ಕಡಿಮೆ ಇದೆ ಎಂದು ನಾವು ತಮಿಳು ನಾಡಿಗೆ ಹೇಳುವುದಿಲ್ಲ, ಅವರು ನಮಗೆ ನೀರುಬೇಕೆಂದು ಕೇಳಿರುತ್ತಾರೆ, ನಾವು ಆ ಪ್ರಕಾರ ಕೊಟ್ಟಿರುತ್ತೇವೆ ಈಗ ಕರ್ನಾಟಕ ರಾಜ್ಯದ ಬಳ್ಳಾರಿ, ರಾಯಚೂರು ಪ್ರದೇಶದಲ್ಲಿ, ತುಂಗಭದ್ರಾ ಜಲಾಶಯದ ಆಚ್ಚುಕಟ್ಟು ಪ್ರದೇಶದಲ್ಲಿ ಒಂದುನೂರು ಕೋಟಿ ರೂಪಾಯಿ ಬೆಳೆ ನಾಶವಾಗತಕ್ಕ ಸಂದರ್ಭ ಬಂದಾಗ ಏನಾದರೂ ಮಾಡಿ ಅದನ್ನು ನಾವು ಉಳಿಸಿಕೊಳ್ಳಬೇಕು. ಟೋಟಲ್ ಪ್ರೊಡೆಕ್ಷನ್ ದೃಷ್ಟಿಯಿಂದ ಉಳಿಸಿಕೊಳ್ಳಬೇಕು, ಈ ರೀತಿ ಉಳಿಸಿಕೊಂಡರೆ ರೈತರಿಗೆ ಒಂದು ದೊಡ್ಡ ಕೊಡುಗೆಯನ್ನು ಕೊಟ್ಟಂತಾಗುತ್ತದೆ. ನೀವು ನಿಮ್ಮ ಪ್ರಯತ್ನವನ್ನು ಮಾಡಿದ್ದೀರಿ. ಆದರೆ ಮಾನ್ಯ ಜೆ. ಹೆಚ್. ಪಟೇಲ್‌ರವರು ಒಂದು ಸಭೆಯನ್ನು ಮಾಡಿ ಭದ್ರಾ ಜಲಾಶಯದಲ್ಲಿ ಹೆಚ್ಚಿಗೆ ನೀರು ಇದೆಯೆಂದು ಹೇಳಿದ್ದಾರೆ. ನನಗೆ ಇದು ನಿಜಕ್ಕೂ ಆಶ್ಚರ್ಯವಾಗುತ್ತಿದೆ. ಭದ್ರಾ ಜಲಾಶಯದ ಆಚ್ಚುಕಟ್ಟಿನಲ್ಲಿರತಕ್ಕ ರೈತರು ತಮ್ಮ ಜಮೀನಿನ ಬೆಳೆಗಳಿಗೆ ನೀರು ಸಾಕಾಗುತ್ತಿಲ್ಲ. ನಾವು ನಿಮಗೆ ನೀರನ್ನು ಕೊಡುವುದಿಲ್ಲವೆಂದು ಚಳುವಳಿಯನ್ನು ಮಾಡಿ ದೊಡ್ಡ ರಾದ್ಧಾಂತವನ್ನು ಮಾಡಿರತಕ್ಕದ್ದು ತಮಗೆಲ್ಲಾ ಗೊತ್ತಿದೆ. ಅಂಥಾದ್ದರಲ್ಲಿ ಭದ್ರಾ ಜಲಾಶಯದಲ್ಲಿ ನೀರು ಜಾಸ್ತಿ ಇದೆಯೆಂದು ಮಾನ್ಯ ಪಟೇಲ್‌ರವರು ಹೇಳಿರತಕ್ಕದ್ದು ನನಗೆ ನಿಜವಾಗಿಯೂ ಆಶ್ಚರ್ಯವಾಗತ್ತಿದೆ...

ಶ್ರೀ ಎಸ್. ಆರ್. ಬೊಮ್ಮಾಯಿ.—ಹಾಗೆ ಹೇಳಿಲ್ಲ. ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ —ಹಾಗಾದರೆ ಇನ್ನೂ ತೀರ್ಮಾನವಾಗಿಲ್ಲ ತಾನೆ ? ಭದ್ರಾ ಆಚ್ಚುಕಟ್ಟು ಪ್ರದೇಶದಲ್ಲಿರತಕ್ಕ ಬೆಳೆಯನ್ನು ಕಳೆದುಕೊಂಡು ಚನ್ನಗಿರಿ ಭಾಗದ ಜನರು ಮತ್ತೆ ಚಳುವಳಿಯನ್ನು ಮಾಡಾವುದಕ್ಕೆ ದಯವಿಟ್ಟು ತಾವು ಅವಕಾಶವನ್ನು ಕೊಡಬೇಡಿ I am not an Irrigation Engineer nor you. The entire matter hinges upon only one point....ನಿಮ್ಮ ಇಂಜಿನಿಯರ್‌ಗಳು ಏನು ಅಭಿಪ್ರಾಯವನ್ನು ಕೊಡುತ್ತಿದ್ದಾರೆ ಎಂಬುದನ್ನು ನೋಡಿ ಭದ್ರಾ ಜಲಾಶಯದಲ್ಲಿ ನೀರು ಜಾಸ್ತಿ ಇದ್ದರೆ ಅದನ್ನು ಕೊಡುವುದಕ್ಕೆ ಯಾರೂ ಅಬ್ಜಕ್ಷನ್ ಮಾಡುವುದಕ್ಕೆ ಸಾಧ್ಯವಿಲ್ಲ. ಎರಡು ಟಿ ಎಂ. ಸಿ. ಎಫ್. ಟಿ. ನೀರನ್ನು ಡೈವರ್ಟ್ ಮಾಡುತ್ತೇವೆಂದು ಹೇಳುವುದಾದರೆ ಮಾಡಿ. ಆದರೆ ನನಗೆ ತಿಳಿದಿರುವಂತೆ ಆ ರೀತಿ ಇಲ್ಲ...

ಶ್ರೀ ಎಂ. ರಾಮಪ್ಪ.—ಸ್ವಾಮಿ, ಚೀಫ್ ಇಂಜಿನಿಯರ್ ಎಂದು ಯಾರಿದ್ದಾರೆ, ಎರಡೂ ಕಡೆಗೂ ಅವರೊಬ್ಬರೇ ಇರತಕ್ಕದ್ದು.

ಶ್ರೀ ಎಂ. ಮಲ್ಲಪ್ಪ.—ಅವರು ಜನರ ಒತ್ತಡಕ್ಕೆ ಮಣಿದು ಹಾಗೆ ಹೇಳಿರಬಹುದು.

ಶ್ರೀ ಎಸ್. ಬಂಗಾರಪ್ಪ.—ಒಬ್ಬರೇ ಚೀಫ್ ಇಂಜಿನಿಯರ್‌ರವರು ಎರಡು ಕಡೆಗೂ ಇರುವುದರಿಂದ ನೀರು ಜಾಸ್ತಿ ಇದ್ದರೆ ಬಿಟ್ಟುಕೊಡಬಹುದು. ಪತ್ರಿಕಾ ವರದಿಯ ಪ್ರಕಾರ ಟಿ.ಎಂ.ಸಿ.ಎಫ್.ಟಿ. ಅಲ್ಲ, ಳ ಟಿ.ಎಂ.ಸಿ.ಎಫ್.ಟಿ. ನೀರು ಬೇಕಾಗುತ್ತದೆ ಆದರೆ ಅವರು ಯಾವ ವರದಿಯ ಪ್ರಕಾರ ೨ ಟಿ.ಎಂ.ಸಿ.ಎಫ್.ಟಿ ಎಂದು ಹೇಳಿದ್ದಾರೋ ನನಗೆ ಗೊತ್ತಿಲ್ಲ. ೨ ಟಿ.ಎಂ.ಸಿ.ಎಫ್.ಟಿ. ನೀರನ್ನು ಕೇಳಿದ್ದರೆ, ಜಾಸ್ತಿ ನೀರು ಇದ್ದರೆ ಬಿಟ್ಟುಕೊಡಿ...

ಶ್ರೀ ಎಂ. ರಾಮಪ್ಪ.—೩ ಟಿ.ಎಂ.ಸಿ.ಎಫ್.ಟಿ. ನೀರು ಜಾಸ್ತಿ ಇದೆ. ಆದ್ದರಿಂದ ೨ ಟಿ.ಎಂ.ಸಿ ಎಫ್.ಟಿ. ನೀರು ಕೊಡಬಹುದು.

ಶ್ರೀ ಎಸ್. ಬಂಗಾರಪ್ಪ.—೩ ಟಿ.ಎಂ.ಸಿ.ಎಫ್.ಟಿ. ಇದ್ದರೆ ಕೊಡಿ...

ಶ್ರೀ ಪಂಪಾಪತಿ.—ಜಾಸ್ತಿ ಇದ್ದರೆ ಕೊಡಬಹುದು. ಆದರೆ ಜಾಸ್ತಿ ಇದೆಯೆಂದು ಹೇಳಿಕೊಂಡು ನೀರು ಕೊಡುವುದಕ್ಕೆ ಹೋಗಿ ಅಲ್ಲಿಯ ಬೆಳೆಯೂ ಹಾಳಾಗಿ, ಇಲ್ಲಿಯ ಬೆಳೆಯೂ ಹಾಳಾಗುವಂತೆ ಮಾಡುವುದಕ್ಕೆ ಹೋಗಬೇಡಿ. ಸರ್ಕಾರದವರು ಇದರ ಬಗ್ಗೆ ಚೆನ್ನಾಗಿ ಪರಿಶೀಲನೆ ಮಾಡಿನೋಡ ಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ನಾನಾದರೂ ತಮಗೆ ಹೇಳುವುದಿಷ್ಟೆ, ನನಗೆ ತಿಳಿದುಬಂದಿರುವ ಪ್ರಕಾರ ಆ ಭಾಗದಲ್ಲಿ ರೈತರ ಚಳುವಳಿ ಬಹಳವಾಗಿ ನಡೆಯುತ್ತಿದೆ. ಆ ಚಳುವಳಿ ಎಂದರೆ ಪಕ್ಷಾತೀತವಾಗಿ ನಡೆಯುತ್ತಿದೆ. ಕಾಂಗ್ರೆಸ್‌ನವರೂ, ಜನತಾ ಪಕ್ಷದವರೂ ಜನತಾ ದಳದವರೂ ಇನ್ನೂ ಬೇರೆ ಬೇರೆ ಪಕ್ಷದವರೆಲ್ಲರೂ ಸೇರಿಕೊಂಡು ಅಲ್ಲಿಯ ಬೆಳೆಯನ್ನು ಉಳಿಸಿಕೊಡಿ ಎಂದು ಗಲಾಟೆ ಮಾಡುತ್ತಿದ್ದಾರೆ. ಇದರ ಬಗ್ಗೆ ತಾವು ಏನಾದರೂ ಮೊದಲೇ ತೀರ್ಮಾನವನ್ನು ತೆಗೆದು ಕೊಂಡಿದ್ದರೆ ಇಲ್ಲಿ ಅದನ್ನು ಹೇಳುತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ. ಅಲ್ಲಿ ಸುಮಾರು ೧೦೦ ಕೋಟಿ ರೂಪಾಯಿಯ ಬೆಳೆಯನ್ನು ಏ ಟ್ಟಿದ್ದಾರೆ ಅದನ್ನು ನೀವು ಉಳಿಸಿಕೊಡಬೇಕೆಂಬ ಉದ್ದೇಶದಿಂದ ನಾನು ಈ ಮಾನ್ಯ ಹೇಳುತ್ತಿದ್ದೇನೆ, ಇದರ ಬಗ್ಗೆ ತಾವು ಏನಾದರೂ ತೀರ್ಮಾನವನ್ನು ತೆಗೆದು ಕೊಂಡಿದ್ದರೆ ದಯವಿಟ್ಟು ಹೇಳಿದರೆ ಒಳ್ಳೆಯದು...

ಶ್ರೀ ಎಸ್ ಆರ್. ಬೊಮ್ಮಾಯಿ.—ನಾನು ಹೆಚ್ಚು ವಿವರಕ್ಕೆ ಹೋಗುವುದಿಲ್ಲ. ಭದ್ರಾಕ್ಕೆ ಸಂಬಂಧ ಪಟ್ಟಂತೆ, ತುಂಗಭದ್ರಾಕ್ಕೆ ಸಂಬಂಧಪಟ್ಟಂತೆ ರಾಯಚೂರು, ಬಳ್ಳಾರಿ ಭದ್ರಾವತಿ, ಹರಪನಹಳ್ಳಿಯ ಸಂಬಂಧಪಟ್ಟ ಶಾಸಕರ ಸಭೆಯನ್ನು ಕರೆದಿದ್ದೇನೆ. ಮೊದಲು ಅಧಿಕಾರಿಗಳ ಸಭೆಯನ್ನು ಕರೆದು ಅನಂತರ ಶಾಸಕರ ಸಭೆಯನ್ನು ಕರೆದಿದ್ದೇನೆ. ಆದ್ದರಿಂದ ನಾಳೆಯ ಅಧಿಕಾರಿಗಳ ಸಭೆಗೆ ಅನುಕೂಲ ವಾಗುವಂಥ ತಮ್ಮ ಸಲಹೆಗಳೇನಾದರೂ ಇದ್ದರೆ ದಯವಿಟ್ಟು ಕೊಡಿ.

೧-೩೦ ಪಿ.ಎಂ.

ಶ್ರೀ ಎಂ. ವೀರಪ್ಪ,ಮೊಯಿಲಿ(ಕಾರ್ಕಳ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ನಾಳೆಯದಿವ ಸಭೆಯನ್ನು ಕರೆಯುವುದಾಗಿ ತಿಳಿಸಿದರು. ಇದು ಸ್ವಾಗತಾರ್ಹವಾದ ವಿಚಾರ. ಏತಕ್ಕೆಂದರೆ ಈ ಬಗ್ಗೆ ತೀರ್ಮಾನವಾಗಬೇಕಾಗಿದೆ. ಬೆಳೆ ಒಣಗುತ್ತಿದೆ. ನಮ್ಮ ಹಿಂದೆ ಮಾತನಾಡಿದಂಥ ನಮ್ಮ ಮಾನ್ಯ ನಾಯಕರು ಮತ್ತು ಸನ್ಮಾನ್ಯ ಸದಸ್ಯರು ಹೇಳಿದ ಪ್ರಕಾರ ಇಲ್ಲಿ ಕೆಲವು ಪ್ರಶ್ನೆಗಳು ಉದ್ಭವವಾಗುತ್ತದೆ. ಆದ್ದರಿಂದ ಇದರ ಬಗ್ಗೆ ಹೇಳುವುದರಿಂದ ನಾಳೆಯ ಚರ್ಚೆಗೂ ಕೂಡ ಇದರಿಂದ ಸಹಾಯವಾಗಬಹುದು ಎನ್ನುವ ದೃಷ್ಟಿಯಿಂದ ಪ್ರಸ್ತಾಪ ಮಾಡುತ್ತಿದ್ದೇನೆ. ಈ ತುಂಗಭದ್ರಾ ಜಲಾನಯನದಲ್ಲಿ ನೀರು ಹೇಗೆ ನಮ್ಮ ಕರ್ನಾಟಕಕ್ಕೆ ಬರಬೇಕು ಎನ್ನುವ ಬಗ್ಗೆ ಹೇಳುವುದಾದರೆ, ಇಲ್ಲಿ ಪ್ರಶ್ನೆ ಏನಾಗಿದೆ ಎಂದರೆ, ನವೆಂಬರ್ ಡಿಸೆಂಬರ್ ಮತ್ತೆ ಜನವರಿಯಲ್ಲಿ ಸಲಹಾ ಸಮಿತಿಗಳ ಸಭೆಗಳು ನಡೆದವು. ಆ ಸಲಹಾ ಸಮಿತಿಯಲ್ಲಿ ಏಪ್ರಿಲ್‌ವರೆಗೆ ನೀರನ್ನು ಕೊಡಬಹುದೆಂದು ನಿರ್ಣಯವಾಗಿದೆ. ಈ ನಿರ್ಣಯದಲ್ಲಿ ಯಾವರೀತಿ ನೀರನ್ನು ಕೊಡಬೇಕು ಎನ್ನುವುದೂ ಕೂಡ ತೀರ್ಮಾನವಾಗಿದೆ. ಅದೇ ಪ್ರಕಾರವಾಗಿ ನೋಟಿಫೀಕೇಶನ್ ಕೂಡ ಹೊರಡಿಸಿದ್ದಾರೆ. ೧೫ನೇ ಏಪ್ರಿಲ್‌ವರೆಗೆ ಕೂಡ ನೀರನ್ನು ಯಾವರೀತಿ ಕೊಡಬೇಕಾಗುತ್ತದೆ ಎನ್ನುವುದನ್ನು ಪ್ರಕಟಣೆಯ ಮೂಲಕ ಕೊಟ್ಟಿರತಕ್ಕಂಥ ನಕಲೂ ಕೂಡ ಇದೆ. ೧೯೮೮ರಲ್ಲಿ ಹೆಚ್ಚು ಫ್ಲೋ-ರಿಸರ್ವರಯ ರ್‌ನಲ್ಲಿ ಬಂದುದರಿಂದ ಈ ರೀತಿಯಾದ ನಿರ್ಣಯವನ್ನು ತೆಗೆದುಕೊಳ್ಳಲಾಯಿತು, ಈ ನಿರ್ಣಯವನ್ನು ಯಾವ ಆಧಾರದ ಮೇಲೆ ತೆಗೆದುಕೊಳ್ಳಲಾಯಿತೋ ಆ ನಿರ್ಣಯವನ್ನು ತೆಗೆದುಕೊಂಡಮೇಲೆ ಈ ಒಂದು ಪರಿಸ್ಥಿತಿ ಉದ್ಭವವಾಗಿದೆ. ಅದರ ಬಗ್ಗೆ ಕೂಲಂಕುಶವಾಗಿ ತನಿಖೆ ಮಾಡಬೇಕಾಗುತ್ತದೆ. ಮತ್ತೆ ಇದರಲ್ಲಿ ಎರಡು ಭಾಗ ಬರುತ್ತದೆ. ಮೊದಲನೆಯ ಭಾಗ ನೀರನ್ನು ದುರುಪಯೋಗ ಮಾಡಿದ್ದಾರೆಂದು ಎನ್ನುವುದು ಒಂದು, ಎರಡನೆಯ

ಭಾಗ ಏನಂ ನಿರ್ಣಯವನ್ನು ಸಲಹಾ ಸಮಿತಿಯಲ್ಲಿ ತೆಗೆದುಕೊಂಡಿತ್ತೋ ಆ ನಿರ್ಣಯವನ್ನು ಅನುಷ್ಠಾನಕ್ಕೆ ತರದೆ ಆದರ ನಿರ್ವಹಣೆ ಸರಿಯಾಗಿಲ್ಲವೆನ್ನುವುದು ಮತ್ತೊಂದು ಭಾಗವಾಗಿದೆ. ಈ ಮಧ್ಯದಲ್ಲಿ ಕೆಲವು ರಾಜಕೀಯ ಪ್ರಭಾವ ಇರಬಹುದು ಅಥವಾ ಪ್ರದೇಶ ಪ್ರಭಾವ ಇರಬಹುದು. ಇದರಲ್ಲಿ ಕಾಗದಪತ್ರಗಳನ್ನು ಕೊಟ್ಟ ಇಂಜನೀಯರ್ ಕೂಡಾ ಸಲಹಾ ಸಮಿತಿಯ ವಿರುದ್ಧವಾಗಿ ಕಾರ್ಯಗತ ಮಾಡಿರುವುದು ಅಲ್ಲಿ ಕಂಡುಬಂದಿದೆ. ಆದರಿಂದ ಸಹ ಕೆಲವು ಕಡೆಗಳಲ್ಲಿ ಹೆಚ್ಚು ನೀರು ಉಪಯೋಗವಾಗಿದ್ದು, ಕೆಲವು ಕಡೆ ಕಡಿಮೆ ನೀರು ಉಪಯೋಗವಾಗಿ ದುರುಪಯೋಗವಾಗಿರತಕ್ಕಂಥ ಪರಿಸ್ಥಿತಿ ಬಂದಿರುತ್ತದೆ. ನೀರು ಕಡಿಮೆ ಯಾಗುವುದು ಸಾಮಾನ್ಯವಾಗಿ ನಾಳೆ ಸರಿಯಾಗಿ ಬರದಿದ್ದರೆ, ಮತ್ತೆ ನೀರು ಜಲಾಶಯದಲ್ಲಿ ತುಂಬಿದಿದ್ದರೆ ರೈತರು ಬೆಳೆಯನ್ನು ಪಡತಕ್ಕಂಥದ್ದು ಸಾಮಾನ್ಯವಾಗಿ ಇರುತ್ತದೆ. ಇದನ್ನು ಹೇಗೆ ಎದುರಿಸಬೇಕು ಎನ್ನುವ ಬಗ್ಗೆ ನೀರಾವರಿ ಇಲಾಖೆಯವರಂ ಸರಿಯಾದ ರೀತಿಯಲ್ಲಿ ಪ್ರಕಟಣೆಯನ್ನು ಕೊಡಬೇಕು. ಇಂತಿಷ್ಟು ನೀರು ಇದೆ. ಇಂತಿಷ್ಟು ನೀರು ಕೊಡುವುದು ನಮ್ಮ ಪರಿಮಿತಿಯಲ್ಲಿ ಹತೋಟಿಯಲ್ಲಿರುತ್ತದೆಂದು ಹೇಳಬೇಕು. ಆದರೆ ಇದು ಯಾವುದನ್ನು ಹೇಳದೆ ಯಾವ ನೀರು ಏಪ್ರಿಲ್‌ವರೆಗೆ ಕೊಡುವ ಸಾಧ್ಯತೆ ಇದೆ ಎಂದು ಹೇಳಿದಮೇಲೆ ಅದರ ನಿರ್ವಹಣೆಯನ್ನು ಪಹಿಸುತಕ್ಕಂಥ ಇಂಜನೀಯರ್ ಯಾರದೋ ಪ್ರಭಾವಕ್ಕೆ ಒಳಗಾಗಿ ಸ್ವೇಚ್ಛಾಚಾರವಾಗಿ ನಡೆದುಕೊಂಡಿದ್ದಾರೆ. ಅಂದರೆ ಶಾಸಕರೇ ಇರಬಹುದು, ಬೇರೆ ಯಾರೆ ಇರಬಹುದು, ಯಾವ ಅಚ್ಚುಕಟ್ಟಿನಲ್ಲೂ ಇಂಥ ಒಂದು ಸ್ವೇಚ್ಛಾಚಾರ ನಡೆಯಬಹುದು. ನನಗೆ ತಿಳಿದ ಪ್ರಕಾರ ಇಲ್ಲಿ ಕೆಲವು ಪ್ರಭಾವಿಗಳಿಂದ ಸ್ವೇಚ್ಛಾಚಾರ ನಡೆಯುತ್ತಿದೆ. ನೀರಾವರಿ ಅಧಿಕಾರಿಗಳು ಸ್ವೇಚ್ಛಾಚಾರಿಗಳಾಗಿ ಮ್ಯಾನೇಜ್‌ಮೆಂಟನ್ನೇ ಉಲ್ಲಂಘನೆ ಮಾಡಿರತಕ್ಕಂಥ ಪರಿಸ್ಥಿತಿ ಇದೆ. ಈ ವಿಷಯದಲ್ಲಿ ಅಧಿಕಾರಿಗಳ ತಪ್ಪು ಇದ್ದಲ್ಲಿ ಇಷ್ಟರವರೆಗೆ ನಿಮ್ಮ ಗಮನಕ್ಕೆ ಬಂದಿದ್ದರೆ immediately annouce to-day-keep those Officers under suspension. Let them know the Government mind. ಈ ರೀತಿ ಅಚ್ಚುಕಟ್ಟು ರೈತರಿಗೆ ಬೆಳೆ ಬಂದಿರತಕ್ಕಂಥದ್ದು ೧೦೦ ಕೋಟಿ ಎಂದು ಹೇಳಿ ನನಗೆ ವರದಿ ಬಂದಿರುತ್ತದೆ. ರೈತರು ಹೇಳಿದ ಪ್ರಕಾರ ರಾಯಚೂರು ಬೆಳ್ಳಾರಿಯಲ್ಲಿ ೨–೩ ಕೋಟಿ ಬೆಲೆ ಬಾಳತಕ್ಕಂಥ ಬೆಳೆ ಹಾಳಾಗತಕ್ಕಂಥ ಪರಿಸ್ಥಿತಿ ಅಲ್ಲಿ ಉದ್ಭವವಾಗಿದೆ. ಆದ್ದರಿಂದ ಈ ರೀತಿ ಬೆಳೆ ಕೆಟ್ಟುಹೋಗುವುದಕ್ಕೆ ಅಧಿಕಾರಿಗಳು ಯಾರ ಪ್ರಭಾವಕ್ಕೆ ಒಳಗಾಗಿದ್ದಾರೆ ಎನ್ನುವುದನ್ನು ಹೇಳಬೇಕು. Government has to own responsibility. You will have to compensate those farmers. If it is natural calamities it is alright– if it is created becasue of the mismangement. abuse of power–I think Governmen has to own the responsibility. ಏಕೆಂದರೆ ಇದು ಮುಂದೆ ನಡೆಯಬಾರದು. ಇನ್ನೊಂದು ಭಾಗ ಇದರಲ್ಲಿ ಬಂದಿದ್ದು ಏನೆಂದರೆ ಈಗ ಪರಿಸ್ಥಿತಿ ಈ ರೀತಿ ಇರುವಾಗ ನಮಗೆ ತಿಳಿದು ಬಂದ ಹಾಗೆ ೧೫–೨೦ ದಿನಗಳ ಹಿಂದೆ ಕೆನಾಲ್‌ನಲ್ಲಿ ಆಂಧ್ರಪ್ರದೇಶದವರಿಗೆ ನೀರು ಬಿಡದೆ ನದಿಗೆ ನೀರು ಬಿಟ್ಟು ಕೊಡತಕ್ಕ ಅವಶ್ಯಕತೆ ಏನಿತ್ತು ? ತಾವು ಇದರಲ್ಲಿ ಹಸ್ತಕ್ಷೇಪ ಮಾಡಿರಲಿಕ್ಕೆ ಇಲ್ಲ ವೆಂದೂ ನಾನು ತಿಳಿದುಕೊಂಡಿದ್ದೇನೆ. ಇದನ್ನು ಯಾರೂ ಮಾಡಿದ್ದಾರೆ ? ಯಾವ ಒತ್ತಡದಿಂದ ಆಂಧ್ರದ ಪಾಲಿನ ನೀರನ್ನು ನದಿಗೆ ಬಿಟ್ಟರು ? ಹಾಗೆ ಬಿಟ್ಟಾಗ ವಾಟರ್ ಲೆವಲ್‌ನಲ್ಲಿ ಕಡಿಮೆ ಆಯಿತು. ನಮ್ಮ ಕೆನಾಲ್‌ನಲ್ಲಿ ಕೂಡ ನೀರನ್ನು ಉಪಯೋಗ ಮಾಡುವುದಕ್ಕೆ ಅಸಾಧ್ಯವಾಗುತ್ತದೆ. ಇದರಿಂದ we have got to maintain the level. Major component of the problem is also because of this We couldnot maintain the water level and we could not use it. ಈ ಪರಿಸ್ಥಿತಿ ಅಲ್ಲಿ ಉದ್ಭವವಾಗಿದೆ. ಇದನ್ನು ತಾವು ವಿಚಾರ ಮಾಡಬೇಕು. ಮತ್ತು ತಪ್ಪಿತಸ್ಥರನ್ನು ಶಿಕ್ಷೆ ಮಾಡಬೇಕು. ಈ ವಿಷಯದ ಬಗ್ಗೆ ನಮಗೆ ತಿಳಿಯಬೇಕು. ಆದ್ದರಿಂದ ನಾಳೆ ತಾವು ವಿಚಾರ ಮಾಡಿದ ಮೇಲೆ ಸದನಕ್ಕೆ ಹೇಳಿಕೆ ಕೊಡಬೇಕು. ಎಲ್ಲಿಂದ ಒತ್ತಡ ಬಂದಿದೆ? ತಪ್ಪಿತಸ್ಥರು ಯಾರು ? ಈ ಬಗ್ಗೆ ಸಂಪೂರ್ಣ ಮಾಹಿತಿಯನ್ನು, ವಿವರಗಳನ್ನು ಕೊಡಬೇಕಾಗುತ್ತದೆ ಮತ್ತು ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. Farmers have to be compensated because of the commissions and omissions or the Pressure or some external forces. Officers will have to be punished. ಅದನ್ನು ತಾವು ಮಾಡಬೇಕಾಗುತ್ತದೆ. ಇದರ ಜೊತೆಗೆ ಭದ್ರಾದಿಂದ ಹೆಚ್ಚುವರಿ ನೀರನ್ನು ಕೊಡತಕ್ಕದ್ದು. ಇದ್ದರೆ ಅವರ ಬಗ್ಗೆ ಕೂಡ ತಾವು ನಾಳೆ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ Crops are deteriorating. We cannot afford to wait for it any long. It is a man made problem. ಸರ್ಕಾರಕ್ಕೆ ಅಧಿಕಾರ, ಹಣ ಎಲ್ಲ ಇದ್ದರೂ ಕೂಡ ನೀರಾವರಿ ಇಲಾಖೆ ತನ್ನ ಕಾರ್ಯವನ್ನು ಸರಿಯಾಗಿ ನಿರ್ವಹಿಸಲಿಲ್ಲ. ಎಂಬುದಕ್ಕೆ ಇದಕ್ಕಿಂತ ದೊಡ್ಡ ದೃಷ್ಟಾಂತ ಬೇರೆ

ಇಲ್ಲ. ನಿಮಗೆ ಯಾರ ಒತ್ತಾಯ ಬರಲಿ they have got to dischorge their duties. ಆದುದರಿಂದ ಎಲ್ಲಾ ವಿವರಗಳನ್ನು ಒಳಗೊಂಡ ವಿವರಣೆಯನ್ನು ತಾವು ನಾಳೆ ಸದಸದ ಮುಂದೆ ಇಡಬೇಕು. ಆಂಧ್ರಕ್ಕೆ ಕೊಡತಕ್ಕ ನೀರನ್ನು ನದಿಗೆ ಬಿಡದಿದ್ದರೆ ಈ ಪರಿಸ್ಥಿತಿ ಉದ್ಭವ ವಾಗುತ್ತಿರಲಿಲ್ಲ. To certain extent we could have managed it. ನೀರನ್ನು ಬೇಕಾದವರು ಬೇಕಾದ ಹಾಗೆ ಉಪಯೋಗ ಮಾಡತಕ್ಕ ಪ್ರಸಂಗ ಉಂಟಾಗಿದೆ. ಆದ್ದರಿಂದ ಈ ದಿಸೆಯಲ್ಲಿ ಸದನದ ಸಂಪೂರ್ಣ ವಿಶ್ವಾಸವನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಅಲ್ಲದೆ, ಈ ಬಗ್ಗೆ ಚರ್ಚೆ ಕೂಡ ಆಗಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಇದನ್ನು ರೂಲ್ ೬೮ಕ್ಕೆ ಕನ್‌ವರ್ಟ್ ಮಾಡಿ ನಾಳೆ ಬೇಕಾದರೆ ಇಟ್ಟುಕೊಳ್ಳೋಣ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಮಾನ್ಯರೆ ಅಧ್ಯಕ್ಷರೇ, ಈ ನೀರಾವರಿ...

ಅಧ್ಯಕ್ಷರು.—ಸ್ವಲ್ಪ ತಡೆಯಿರಿ. ಅಡ್ಜರ್ನ್‌ಮೆಂಟ್ ಮೋಷನ್ ಇದೆ. ಯಾರು ಸಹಿ ಮಾಡಿ ಕೊಟ್ಟಿದ್ದಾರೊ ಅವರಷ್ಟೇ ಮಾತನಾಡಬೇಕಾಗುತ್ತದೆ. ಇದನ್ನು ರೂಲ್ ೬೮ಕ್ಕೆ ಕನ್‌ವರ್ಟ್ ಮಾಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ರೂಲ್ ೬೮ ಬೇಡ.

SRI MOHAMED OMER.—There will be drinking water problem to Raichur City in the cannal is closed.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮೆಲ್ಲರನ್ನು ಕರೆಯುತ್ತಿದ್ದೇನೆ. ನಿಮ್ಮ ಸಲಹೆ ಏನಿದೆ ನೀವೇನು ವಿಚಾರವನ್ನು ಇಡುತ್ತೀರಿ ಅದನ್ನೆಲ್ಲ ಚರ್ಚೆ ಮಾಡೋಣ. ನಾಳೆ ಸಭೆ ಆದಮೇಲೆ ಇಲ್ಲಿ ನಾನು ಒಂದು ಹೇಳಿಕೆಯನ್ನು ನೀಡುತ್ತೇನೆ. ಆಗ ಏನಾದರೂ ಇದ್ದಾರೆ ಹೇಳಿ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಮೊಯ್ಲಿಯವರು ಕೆಲವು ವಿಚಾರಗಳನ್ನು ಎತ್ತಿದ್ದಾರೆ. ಇಲ್ಲಿ ಒಂದು ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಆಂಧ್ರ ಮತ್ತು ಕರ್ನಾಟಕ ರಾಜ್ಯಗಳ ನದಿ ನೀರನ್ನು ಹಂಚಿಕೊಳ್ಳತಕ್ಕದ್ದರ ಬಗ್ಗೆ ಬಚಾವತ್ ಅವಾರ್ಡ್ ಆಗಿದೆ.

ಅದಕ್ಕೆ ಒಂದು ಬೋರ್ಡ್ ಇದೆ. ಆ ಬೋರ್ಡಿನಲ್ಲಿ ನಮ್ಮ ರಾಜ್ಯದ ಸದಸ್ಯರು, ಆಂಧ್ರದ ಸದಸ್ಯರು ಮತ್ತು ಕೇಂದ್ರದ ಸದಸ್ಯರು ಇದ್ದಾರೆ. It is completely under the control of the Board. We are also governed by the Bachawat Award. There are certain regulations also. ನೀರನ್ನು ಯಾವರೀತಿ ಬಿಡಬೇಕು, ಯಾವಾಗ ಬಿಡಬೇಕು, ಅವರ ಹಕ್ಕೆಷ್ಟು, ನಮ್ಮ ಹಕ್ಕೆಷ್ಟು, ಕಾಲುವೆಗಳಿಗೆ ಹೋಗುವ ನೀರೆಷ್ಟು ಇದೆಲ್ಲಾ ವಿವರಗಳವೆ. ಆದರೆ ನಾನು ಆ ವಿವರಗಳಿಗೆ ಹೋಗುವುದಿಲ್ಲ. ನದಿಯಲ್ಲಿ ನೀರು ಬಿಡುವ ಬಗ್ಗೆ ಹೇಳಿದ್ದೀರಿ. ಇದು ಮೊದಲಿನಿಂದ ನಡೆದುಕೊಂಡು ಬಂದಿದೆ. ಇವತ್ತು ಹೊಸದಾಗಿ ಮಾಡಿಲ್ಲ. ೧೫ ವರ್ಷದಿಂದ. ಬಚಾವತ್ ಅವಾರ್ಡ್ ಆದಾಗಿನಿಂದ ನಡೆದುಬಂದ ವಿಚಾರಗಳಿವೆ. ಆ ವಿವರಗಳಿಗೆ ನಾನು ಹೋಗುವುದಿಲ್ಲ. ಆದರೆ ಇದು ಸರ್ಕಾರದ ಗಮನಕ್ಕೆ ಬಂದಾಗ ಅಧಿಕಾರಿಗಳು ನೋಟಿಫಿಕೇಷನ್ಸ್ ಮಾಡಿದ್ದಾರೆ. ತಾವು ಹೇಳಿದಹಾಗೆ ಸಲಹಾ ಸಮಿತಿಗಳ ಸಭೆ ಆಗಿದೆ. ಈ ವರ್ಷ ಡಿಸೆಂಬರ್‌ನಲ್ಲಿ ಮಳೆ ಆದಾಗ ಸರ್ವೇ ಸಾಧಾರಣವಾಗಿ ೧೯ ಟಿ.ಎಂ.ಸಿ. ನೀರು ಬರಬೇಕಾಗಿತ್ತು. ಹೋದವರ್ಷ ಅಷ್ಟು ಬಂದಿತ್ತು. ಆ ಆಧಾರದ ಮೇಲೆ ನೋಟಿಫಿಕೇಷನ್ ಮಾಡಿದ್ದಿದೆ. ಆದರೆ ಈ ವರ್ಷ ೩ ಟಿ.ಎಂ.ಸಿ. ನೀರು ಬಂತು. ನೀರು ಕಡಿಮೆ ಬಂದಿದ್ದರ ಜೊತೆಗೆ ನಾವೆಲ್ಲಾ ೨೫ ವರ್ಷಗಳಿಂದ ನೋಡಿದ್ದೇವೆ, ಒಂದು ಲಕ್ಷಕ್ಕಿಂತ ಹೆಚ್ಚು ಎಕರೆ ಅನ್ ಅಥರೈಸ್ಡ್ ಕಲ್ಟಿವೇಷನ್ ಇದೆ. ಅದರ ಬಗ್ಗೆ ನಾನು ಪಾದ ಮಾಡುವುದಕ್ಕೆ ಹೋಗುವುದಿಲ್ಲ. ಕಳೆದ ಹಲವಾರು ವರ್ಷಗಳಿಂದ ಇದು ನಡೆದುಕೊಂಡು ಬಂದಿದೆ. ನೀರು ಬಿಡುವುದನ್ನು ರೆಗ್ಯುಲೇಟ್ ಮಾಡುವುದು ಬೋರ್ಡ್‌ನವರು. ಆಂಧ್ರ ಪ್ರದೇಶದ ಮುಖ್ಯಮಂತ್ರಿ, ಯಾವರ ಜೊತೆಯಲ್ಲಿ ಯಾವರೀತಿ ಸಹಾಯ ಮಾಡಬಹುದು ಎಂಬ ಬಗ್ಗೆ ನಾಲ್ಕು ಸಲ ಪಾತನಾಡಿದೆ. ನಮ್ಮ ಅಧಿಕಾರಿಗಳನ್ನು ಕಳುಹಿಸಿಕೊಡಿ ಎಂದು ಹೇಳಿದ್ದರು ನಾನು ಅಧಿಕಾರಿಗಳನ್ನು ಕಳುಹಿಸಿಕೊಟ್ಟೆ. ಅಲ್ಲಿ ಅವರು ಚರ್ಚೆ ಮಾಡಿದ್ದಾರೆ. ಮಾನ್ಯ ಮಂತ್ರಿಗಳಾದ ಪ್ರಕಾಶ್ ಅವರು ಸ್ವತಃ ಹೋಗಿ ನೀರಾವರಿ ಮಂತ್ರಿಗಳ ಹತ್ತಿರ ಮತ್ತು ಅಧಿಕಾರಿಗಳ ಹತ್ತಿರ ಪಾತನಾಡಿಕೊಂಡು ಬಂದಿದ್ದಾರೆ. ಅದಾದ ಮೇಲೆ ಹಿರಿಯ ಸದಸ್ಯರನ್ನು ರೈತರನ್ನು ಕಂಡು ಚರ್ಚೆ ಮಾಡುವುದಕ್ಕೆ ಮೊನ್ನೆ ಕಳಹಿಸಿಕೊಟ್ಟಿದ್ದೆ. ಅವರು ಚರ್ಚೆ ಮಾಡಿಕೊಂಡು ಬಂದಿದ್ದಾರೆ ಅವರ ಸಲಹೆಗಳನ್ನು ತೆಗೆದುಕೊಂಡು ಬಂದಿದ್ದಾರೆ. ರೈತರಿಗೆ ಸಹಾಯ ಮಾಡುವುದಕ್ಕೆ. ಅವರು ಬೆಳೆದಂಥ ಬೆಳೆಗೆ ನೀರು ಕೊಟ್ಟು ಸಾಧ್ಯವಾದಷ್ಟು ಅದನ್ನು ಉಳಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ. ತಾವು ಹೇಳಿದ ಎಲ್ಲಾ ವಿಚಾರಗಳೂ ನನ್ನ

ಗವಾನದಲ್ಲಿವೆ. ರೈತರಿಂದ ತಪ್ಪಾಗಿ ಯೋ ಅಧಿಕಾರಿಗಳಿಂದ ತಪ್ಪಾಗಿ ಯೋ ಎಂಬುದನ್ನು ನೋಡಬೇಕಲ್ಲ. ಯಾರಿಂದ ಹೆಚ್ಚು ನೀರು ಉಪಯೋಗ ಮಾಡಿದ್ದಾರೆ ಎಂಬ ಎಲ್ಲಾ ವ್ಯವಸ್ಥೆಗಳನ್ನೂ ನಾಳೆ ಚರ್ಚೆ ಮಾಡುತ್ತಿದ್ದೇವೆ. ಎಲ್ಲಕ್ಕಿಂತ ಪ್ರಮುಖವಾದುದು ಅವರಿಗೆ ಯಾವ ರೀತಿ ಸಹಾಯ ಮಾಡಬೇಕು ಎಂಬುದು. ನಾಳೆಯ ಸಭೆಗೆ ಸಂಬಂಧಪಟ್ಟ ಜಿಲ್ಲಾ ಶಾಸಕರನ್ನು ಮತ್ತು ಅಧಿಕಾರಿಗಳನ್ನು ನಾಳೆ ಸಾಲ್ಯಕ್ಕೆ ಗಂಟೆಗೆ ಕರೆದಿದ್ದೇನೆ, ನಾಳೆ ಆ ಸಭೆ ನಡೆದಮೇಲೆ ನಾಡಿದ್ದು ಒಂದು ಹೇಳಿಕೆ ಕೊಡುತ್ತೇನೆ. ಅಲ್ಲಿ ಒಮ್ಮತದ ನಿರ್ಣಯ ಆದರೆ ಇಲ್ಲಿ ಹೆಚ್ಚು ಚರ್ಚೆ ಮಾಡುವ ಅವಶ್ಯಕತೆ ಬೀಳುವುದಿಲ್ಲ. ಆದರೆ ಆ ವಿಚಾರವನ್ನು ಈ ಸಭೆಗೆ ತಿಳಿಸತಕ್ಕದ್ದು ನನ್ನ ಕರ್ತವ್ಯ. ಅದನ್ನು ನಾನು ಮಾಡುತ್ತೇನೆ. ಆದ್ದರಿಂದ ದಯವಿಟ್ಟು ಈ ಬಗ್ಗೆ ಈಗ ಚರ್ಚೆ ಬೇಡ. ನಾಳೆ ಸಭೆ ಆದಮೇಲೆ ನಾಡಿದ್ದು ಹೇಳಿಕೆ ಕೊಡುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ನಾಳೆ ಅವರು ಸಭೆ ನಡೆಸುತ್ತಾರೆ. ಅದರಲ್ಲಿ ಸಂಬಂಧಪಟ್ಟ ಶಾಸಕರನ್ನು ಕರೆಸುತ್ತೇವೆಂದು ಹೇಳಿದ್ದಾರೆ. ಸಂಬಂಧಪಟ್ಟ ಶಾಸಕರು ಅಂದರೆ ಬಳ್ಳಾರಿ ಜಿಲ್ಲೆಯ ಶಾಸಕರನ್ನು ಕರೆಸಬೇಕಾಗುತ್ತದೆ. ರಾಯಚೂರು ಜಿಲ್ಲೆಯ ಶಾಸಕರನ್ನು ಕರೆಸಬೇಕಾಗುತ್ತದೆ. ಅದಲ್ಲದೆ ದಾವಣಗೆರೆ ಮತ್ತು ಇತರ ಕಡೆಯಲ್ಲಿ ಇದಕ್ಕೆ ಸಂಬಂಧಪಟ್ಟವರಿದ್ದಾರೆ. ಎರಡನೆಯದು ಅಲ್ಲಿ ಚಳುವಳಿ ರೂಪಿತವಾಗಿದೆ. ಅದರಲ್ಲಿ ಹಲವಾರು ರೈತಸಂಘದ ಮುಖಂಡರುಗಳಿದ್ದಾರೆ. ನಮ್ಮದೊಂದು ರೈತಸಂಘ ಇದೆ. ವೆಂಕಟರಾಮಯ್ಯನವರದೊಂದು ರೈತ ಸಂಘ ಇದೆ. ರುದ್ರಪ್ಪನವರ ರೈತ ಸಂಘ ಇದೆ. ಹೀಗಾಗಿ ಸರ್ವಪಕ್ಷಗಳ ಪ್ರತಿನಿಧಿಗಳ ಚಳುವಳಿ ಅಲ್ಲಿ ನಡೆಯುತ್ತಿದೆ. ಆದ್ದರಿಂದ ರೈತ ಸಂಘದ ಪ್ರತಿನಿಧಿಗಳನ್ನೂ ಕರೆದು ಚರ್ಚೆ ಮಾಡಿದರೆ ಉಪಯೋಗವಾಗಬಹುದು ಎಂಬುದು ನನ್ನ ಅಭಿಪ್ರಾಯ. ಇದರಿಂದ ಚಳುವಳಿ ನಿಲ್ಲಿಸುವುದಕ್ಕೆ ಮತ್ತು ಸಮಸ್ಯೆಯನ್ನು ಪರಿಹರಿಸುವುದಕ್ಕೆ ಸಹಾಯಕವಾಗುತ್ತದೆ. ಆದ್ದರಿಂದ ಅದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೆ.....

ಶ್ರೀ ಎಂ. ರಾಮಪ್ಪ —ಮಾನ್ಯ ಅಧ್ಯಕ್ಷರೇ, ಅವರೂ ಮಾತನಾಡಿದರೆ, ನಾವೂ ಕೂಡಾ ಮಾತನಾಡಬೇಕಾಗುತ್ತದೆ. ಇಲ್ಲಿ ನಾವು ಮಾತನಾಡಬೇಕು, ನೀವು ಮಾತನಾಡಬೇಕೆಂದು ಬಳ್ಳಾರಿ ಮತ್ತು ರಾಯಚೂರಿನವರ ಗಮನಕ್ಕೆ ತಂದ್ದಾಟ ಬೇಡ.

ಅಧ್ಯಕ್ಷರು.—ಮುಖ್ಯಮಂತ್ರಿಯವರು ಹೇಳಿದ್ದಾರೆ. ನಾಳೆ ಚರ್ಚೆಯಾದ ಮೇಲೆ ಇಲ್ಲಿ ಸ್ಟೇಟ್‌ಮೆಂಟ್ ಕೊಡುತ್ತಾರೆ. ಅವಶ್ಯಕವಿದ್ದರೆ ಆ ನಂತರ ಚರ್ಚೆ ಮಾಡಿ. ಆದ್ದರಿಂದ ಈಗ ಈ ವಿಷಯದ ಬಗ್ಗೆ ಕನ್ಸೆಂಟ್ ವಿಥ್‌ಹೆಲ್ಡ್ ಮಾಡೋಣ, ಮತ್ತೆ ನಾಳೆ, ನಾಳಿದ್ದು ತೆಗೆದುಕೊಳ್ಳೋಣ. ಈಗ ಅಪ್ಪಾಜಿಗೌಡ ಅವರ ಗಮನಕ್ಕೆ ಸೆಳೆಯುವ ಸೂಚನೆ.

ಶ್ರೀ ಯು. ಭೂಪತಿ.—ಮಾನ್ಯ ಮುಖ್ಯಮಂತ್ರಿಗಳ ಸೂಚನೆಯನ್ನು ನಾವು ಒಪ್ಪುತ್ತೇವೆ. ಆದರೆ.....

ಅಧ್ಯಕ್ಷರು.—ಈಗ ಈ ವಿಷಯ ಮುಕ್ತಾಯವಾಗಿದೆ.

ಶ್ರೀ ಯು. ಭೂಪತಿ,—ಅವರ ಸೂಚನೆಯಂತೆ ನಾಳೆ ಸಭೆ ನಡೆಯುತ್ತದೆ. ಅದರ ಸರ್ವಾನು ಮತದ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ. ಆ ನೀರಿನ ಹಂಚಿಕೆ ಬಗ್ಗೆ ಆಂಧ್ರ ಮತ್ತು ಕರ್ನಾಟಕ ರಾಜ್ಯಗಳ ಬಗ್ಗೆ ತೆಗೆದ ಮನಸ್ಸಿನ ಚರ್ಚೆ ಆಗಬೇಕು. ಇವತ್ತು ತಾತ್ಕಾಲಿಕ ಸಮಸ್ಯೆ ಇದ್ದು ಯಾವ ರೀತಿ ಸರಿ ಮಾಡಬೇಕೆಂದು ಚರ್ಚೆ ಆಗುತ್ತದೆ. ಆದರೆ ಮುಂದಿನ ದಿನಗಳಲ್ಲಿ ತುಂಗಭದ್ರಾ ಬೋರ್ಡಿನಲ್ಲಿ ಏನೂ ನಡೆಯುತ್ತಿದೆ, ಯಾವ ರೀತಿಯಲ್ಲಿ ನೀರಿನ ಹಂಚಿಕೆಯಾಗುತ್ತಿದೆ, ಹಾಗೂ ಇದರಿಂದ ಕರ್ನಾಟಕಕ್ಕೆ ಯಾವ ರೀತಿ ಅನ್ಯಾಯ ಆಗುತ್ತಿದೆ ಎನ್ನುವ ವಿಷಯ ಈ ಮನೆಯಲ್ಲಿ ಚರ್ಚೆ ಆಗುವುದಕ್ಕೆ ಅವಕಾಶ ವನ್ನು ತಾವು ಕೊಡಬೇಕಾಗುತ್ತದೆಂದು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಸ್ಟೇಟ್‌ಮೆಂಟ್ ಕೊಡುತ್ತೇವೆಂದು ಹೇಳಿದ್ದಾರೆ. ತಾವು ಕುಳಿತುಕೊಳ್ಳಿ. ಸರ್ಕಾರದ ಗಮನ ಸೆಳೆಯಬೇಕಾದ ಶ್ರೀ ಬಿ. ಅಪ್ಪಾಜಿ ಗೌಡ ಅವರು ಗೈರು ಹಾಜರಾಗಿದ್ದಾರೆ. ಈಗ ಮುಂದಿನ ಗಮನ ಸೆಳೆಯುವ ಸೂಚನೆ. ಇದು ಎಸ್. ಬಂಗಾರಪ್ಪ, ಮಲ್ಲಾರಿಗೌಡ, ಎಸ್. ಪಾಟೀಲ್ ಹಾಗೂ ಇತರ ಸದಸ್ಯರ ಹೆಸರಿನಲ್ಲಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ.....

ಶ್ರೀ ಶ್ರೀರಂಗದೇವರಾಯಲು.—ಮಾನ್ಯ ಅಧ್ಯಕ್ಷರೇ, ನೀರಿನ ಹಂಚಿಕೆ ಬಗ್ಗೆ.....

(ಮುಂದಿನ)

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಪಟವಮಕ್ಕಿ ರತ್ನಾಕರ್ —ಅಧ್ಯಕ್ಷರೇ, ಯಡಿಯೂರಪ್ಪನವರು ೩ ಗಂಟೆ ಕಾಲ ಗಲಾಟೆ ಮಾಡಿದರೂ ಸಹಿಸುತ್ತೀರಿ. ಆದರೆ ತಾವು ಶ್ರೀರಂಗದೇವರಾಯಲು ಅವರು ಮಾತನಾಡಲು ಅವಕಾಶ ಕೊಡುತ್ತಿಲ್ಲ. ಇವರಿಗೂ ಅವಕಾಶ ಕೊಡಿ.

ಅಧ್ಯಕ್ಷರು.—ತಾವೆಲ್ಲರೂ ಕುಳಿತುಕೊಳ್ಳಿ.

ಶ್ರೀ ವಿ. ಶ್ರೀರಂಗದೇವರಾಯಲು. —ರೈತರ ಬಗ್ಗೆ ಮಾತನಾಡುವುದಕ್ಕೆ ತಾವು ನನಗೆ ಅವಕಾಶ ಕೊಡಿ.

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಮುಂದೆ ಈ ಬಗ್ಗೆ ಚರ್ಚೆ ಮಾಡೋಣ ಎಂದು ಹೇಳಿದ್ದಾರೆ. ತಾವು ಕುಳಿತುಕೊಳ್ಳಿ. ಈಗಾಗಲೇ ಈ ವಿಷಯವನ್ನು ನಾನು ಮುಕ್ತಾಯ ಮಾಡಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಈಗಾಗಲೇ ಹೇಳಿದ್ದೇನೆ. ಆದರೂ ಸಹ ಈಗ ನಾನೂ ಮಾತನಾಡಬೇಕು, ಅವರು ಮಾತನಾಡಬೇಕೆಂದು ಈ ರೀತಿ ಕಾಚೇಷ್ಟೆವಾಡುವುದು ಸರಿಯಲ್ಲ.

ಶ್ರೀ ಪಟವಮಕ್ಕಿ ರತ್ನಾಕರ್.—ಅಧ್ಯಕ್ಷರೇ, ಇದು ಕಾಚೇಷ್ಟೆಯೇ ?

(ಗೊಂದಲ)

ಅಧ್ಯಕ್ಷರು.—ನಾಳೆ ವಿಚಾರ ಮಾಡೋಣ. ಎಲ್ಲರೂ ಕುಳಿತುಕೊಳ್ಳಿ. ನಾನು ರೇವಣಸಿದ್ಧಯ್ಯ ನವರಿಗೂ ಮಾತನಾಡಲು ಅವಕಾಶ ಕೊಟ್ಟಿಲ್ಲ, ಅನ್ವರಿಯವರಿಗೂ ಮಾತನಾಡಲು ಅವಕಾಶ ಕೊಟ್ಟಿಲ್ಲ. ನಾಳೆ ನಿಮ್ಮನ್ನು ಅವರು ಸ್ಪೆಷಲ್ಲಾಗಿ ಕರೆಸುತ್ತಾರೆ. ಅದಕ್ಕೆ ಮುಂಚೆ ತಾವು ಮಾತನಾಡಲು ನಾನು ಅವಕಾಶ ಕೊಡುವುದಿಲ್ಲ.

(ಗೊಂದಲ)

ಶ್ರೀ ಪಟವಮಕ್ಕಿ ರತ್ನಾಕರ್.—ಮಾನ್ಯ ಮುಖ್ಯಮಂತ್ರಿಯವರು ಆ ರೀತಿ ಮಾತನಾಡಬಾರದಂ. ನಮಗೆ ಮಾತನಾಡಲು ಅವಕಾಶ ಕೊಡುವುದಿಲ್ಲವಾದರೆ ಹೊರಗಡೆ ಹೋಗಿ ಎಂದು ಹೇಳಲಿ.

ಅಧ್ಯಕ್ಷರು.—ಈ ರೀತಿ ಮಾತನಾಡುತ್ತಾ ಹೋದರೆ ರೆಕಾರ್ಡ್ ಮಾಡಬೇಡಿ ಎಂದು ಹೇಳುತ್ತೇನೆ. ಸಣ್ಣ ಹುಡುಗರ ಹಾಗೆ ಕೈ ಹಾಗೆ ಹೀಗೆ ಮಾಡಿ ಮಾತನಾಡುವುದು ಸರಿಯಲ್ಲ. ಈಗ ಮುಂದಿನ ಗಮನ ಸೆಳೆಯುವ ಸೂಚನೆ ಮಾನ್ಯ ಪಾಟೀಲ್ ಅವರದ್ದು.

ಗಮನ ಸೆಳೆಯುವ ಸೂಚನೆ

ಕರ್ನಾಟಕ – ಮಹಾರಾಷ್ಟ್ರ ಗಡಿ ವಿವಾದದಲ್ಲಿ ಜನಮತ ಗಣನೆ ಸಂಗ್ರಹಿಸುವ ಬಗ್ಗೆ ಗಡಿ ಭಾಗದಲ್ಲಿರುವ ಜನರಲ್ಲಿ ಉಂಟಾಗಿರುವ ವಾತಾವರಣದ ಬಗ್ಗೆ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಅಧ್ಯಕ್ಷರೇ, ಕರ್ನಾಟಕ – ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಇತ್ತೀಚೆಗೆ ಕೆಲವೊಂದು ಮುಖಂಡರ ಜೊತೆ ಹಾಗೂ ಜನಮತ ಪಡೆಯುವ ಬಗ್ಗೆ ನಾವು ದಿನೇದಿನೇ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಇದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ, ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ಕರ್ನಾಟಕದಲ್ಲಿ ಬಂದು ಹೋದ ಎಲ್ಲಾ ಸರ್ಕಾರಗಳ ನಿಲುವೂ ಸ್ಪಷ್ಟವಾಗಿದೆ. ಈ ಬಗ್ಗೆ ಸ್ಪಷ್ಟ ನಿಲುವು ಇದೆ. ಈ ಮನೆಯಲ್ಲಿ ಈ ಬಗ್ಗೆ ಮೂರು ಸಲ ನಿರ್ಣಯವನ್ನೂ ಕೂಡಾ ಮಾಡಿದ್ದೇವೆ. ಈ ಬಗ್ಗೆ ನಾವು ಈಗಾಗಲೇ ಪತ್ರಿಕೆಗಳಲ್ಲಿ ಕೂಡಾ ಹೇಳಿಕೆಯನ್ನು ಕೊಟ್ಟಿದ್ದೇವೆ. ಮಹಾಜನ್ ಕಮಿಷನ್ ವರದಿಯನ್ನು ಸಂಪೂರ್ಣವಾಗಿ ಜಾರಿಗೊಳಿಸತಕ್ಕದ್ದು ಎಂದು ಕರ್ನಾಟಕದ ನಿಲುವು ಸಹ ಆಗಿದೆ. ಇದರ ಬದಲಾವಣೆ ಯಾವತ್ತೂ ಇಲ್ಲ. ಇತ್ತೀಚೆಗೆ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಜನಮತ ಪಡೆಯತಕ್ಕ ಮಾತನ್ನು ಹೇಳಿದ್ದಾರೆ. ಆ ಮಾತಿಗೆ ಈಗಾಗಲೇ ನಾನು ಹೇಳಿಕೆಯನ್ನು ಕೊಟ್ಟಿದ್ದೇನೆ. ಇದರಲ್ಲಿ ಜನಾಭಿಪ್ರಾಯ ತೆಗೆದುಕೊಳ್ಳತಕ್ಕ ಪ್ರಶ್ನೆ ಉದ್ಭವವಾಗುವುದಿಲ್ಲ ಮಹಾಜನ್ ಕಮಿಷನ್ ಯಾವ ರೀತಿಯಲ್ಲಿ ಅಸ್ತಿತ್ವಕ್ಕೆ ಬಂತು ಎನ್ನುವ ಬಗ್ಗೆ ಮತ್ತೆ ನಾನು